**ಸಾಕ್ಷಿಗೆ ದಿನಾಂಕ 24.03.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

**1.** ನಾನು ಈ ಪ್ರಕರಣದಲ್ಲಿ, ಮೆಡಿಕಲ್ ಬಿಲ್ಲಿಂಗ್ 9ಭಾಗದ ಕ್ಲರ್ಕ್ ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

**2.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 31 | ಅಧಿಕಾರ ಪತ್ರ |
| ನಿ.ಪಿ 32 | 2 ವೈದ್ಯಕೀಯ ಅಂತಿಮ ಬಿಲ್ಲುಗಳು (ಒಟ್ಟಾಗಿ) |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರಿಂದಃ**

4. ನಮ್ಮ ಆಸ್ಪತ್ರೆಯಲ್ಲಿ ಬಿಲ್ಲಿಂಗ್ ಅಧಿಕಾರಿ ಅಂತ ಇದ್ದು ಅವರೇ ನಿ.ಪಿ.31ರ ಉಸ್ತುವಾರಿಯನ್ನು ನಿರ್ವಹಿಸುತ್ತಾರೆ ಎಂದರೆ ಸರಿ. ಸಮಾನ್ಯವಾಗಿ ಆಸ್ಪತ್ರೆಗಳಲ್ಲಿ ರೋಗಿಗಳು ಬಿಡುಗಡೆ ಹೊಂದುವಾಗ ಅವರಿಗೆ ಅಂತಿಮ ಬಿಲ್ಲನ್ನು ನೀಡುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ಯಾವ ಕಾರಣಕ್ಕಾಗಿ ಅಂತಿಮ ಬಿಲ್ಲನ್ನು ನೀಡಿರುವುದಿಲ್ಲ ಎಂದರೆ ನಮ್ಮ ಆಸ್ಪತ್ರೆಯಲ್ಲಿ ರಿಯಾಯಿತಿ ಕೌಂಟರ್ ಇದ್ದು ಫಾರ್ಮಸಿ ಮತ್ತು ಮೆಟೀರಿಯಲ್ಸ್ ಹೊರತುಪಡಿಸಿ ಆಸ್ಪತ್ರೆಯಲ್ಲಿ 100/100, 80/100, 50/100 ರಂತೆ ರಿಯಾಯಿತಿ ಇರುತ್ತದೆ. ಅರ್ಜಿದಾರರಿಗೆ ಯಾವ ಕಾರಣಕ್ಕಾಗಿ ಅಂತಿಮ ಬಿಲ್ಲನ್ನು ನೀಡಿರುವುದಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆ ಮಾಡಲು ಯಾವುದೇ ರೀತಿಯ ಲಿಖಿತ ಉತ್ತರ ನೀಡಿರುವುದಿಲ್ಲ

ಎಂದರೆ ಸರಿ. ನಾನು ಹಾಜರು ಪಡಿಸಿರುವ ಬಿಲ್ಲುಗಳಲ್ಲಿ ಕೆಲವು ಮುಂಗಡ ರಶೀದಿಗಳು ಇವೆ ಎಂದರೆ ಸರಿ. ಕೆಲವು ಬಿಲ್ಲುಗಳಲ್ಲಿ ಕಾರ್ಪೊರೇಟ್ ಮತ್ತು ಕೆಲವು ಬಿಲ್ಲುಗಳಲ್ಲಿ ಸಾಮಾನ್ಯ ಎಂದು ನಮೂದಾಗಿದೆ ಎಂದರೆ ಅರ್ಜಿದಾರರು ಪ್ರಥಮ ಬಾರಿಗೆ ದಾಖಲಾದಾಗ ಅವರಿಗೆ ರಿಯಾಯಿತಿ ನೀಡಿದ್ದರಿಂದ ಅಂತಹ ಬಿಲ್ಲುಗಳಲ್ಲಿ ಕಾರ್ಪೊರೇಟ್ ಎಂದು ದಾಖಲಾಗಿದ್ದು, 2ನೇ ಬಾರಿ ದಾಖಲಾದಾಗ ರಿಯಾಯಿತಿ ನೀಡಿರುವುದಿಲ್ಲ ಈ ಕಾರಣ ಸಾಮಾನ್ಯ ಎಂದು ನಮೂದಾಗಿದೆ. ಅರ್ಜಿದಾರರಿಗೆ ಈಗಾಗಲೇ ಅಂತಿಮ ಬಿಲ್ಲು ನೀಡಲಾಗಿದ್ದರೂ ಸಹಾ ಅವರಿಗೆ ಅನುಕೂಲವಾಗಲೆಂದು ಸೃಷ್ಟಿತ ಬಿಲ್ಲುಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**1ನೇ ಎದುರುದಾರರು ಗೈರು ಹಾಜರು. ಯಾರು ಪ್ರತಿನಿಧಿಸಿರುವುದಿಲ್ಲ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**